# ರಾಮನಗರ ತಾಲ್ಲೂಕಿನ ಜನಪದ ಗದ್ಯ ಸಾಹಿತ್ಯ: ಒಂದು ಅವಲೋಕನ

**ತಿಮ್ಮೇಗೌಡ ಬಿ.ಪಿ.**

ಸಂಶೋಧನಾ ವಿದ್ಯಾರ್ಥಿ, ಎಸ್.ಜೆ.ಬಿ.ಸಿ.ಎಂ.ಎಸ್. ಕನ್ನಡ ಸಂಶೋಧನಾ ಕೇಂದ್ರ, ಬೆಂಗಳೂರು.

**Received: 02/12/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619600**

## ABSTRACT:

ಪರಂಪರಾಗತವಾಗಿ ಬಾಯಿಂದ ಬಾಯಿಗೆ ಬಂದ ಶಾಬ್ದಿಕ ಅಭಿವ್ಯಕ್ತಿಯನ್ನು ಜನಪದ ಸಾಹಿತ್ಯ ಎಂದು ಕರೆಯಬಹುದು. ಜನಪದ ಸಾಹಿತ್ಯ ಎಂಬುದು 'ಜನಪದರು ದಿನನಿತ್ಯದ ಕಾಯಕದಿಂದ ವಾಸಿಸುವ ಪರಿಸರದಿಂದ ಬದುಕಿನ ಪಲ್ಲಟಗಳು, ಹತಾಶೆ, ನೋವು ಸಿಟ್ಟು ಸೆಡವುಗಳಿಂದ ರೂಪುಗೊಂಡಿರುವಂತದ್ದು. ಜನಪದ ಸಾಹಿತ್ಯ ಬೇರೆಯಲ್ಲ ಇವರ ಬದುಕು ಬೇರೆಯಲ್ಲ' ಎಂಬುದು ಗಮನಾರ್ಹ ವಿಚಾರವಾಗಿದೆ. ಜನಪದರಲ್ಲಿ ಪದ್ಯಸಾಹಿತ್ಯದಷ್ಟೇ ಗದ್ಯಸಾಹಿತ್ಯವು ಕೂಡಾ ನಿತ್ಯದಲ್ಲಿ ಬಳಕೆಯಾಗುವಂತದ್ದು. ಜನಪದ ಸಾಹಿತ್ಯ ಪ್ರಕಾರದಲ್ಲಿ ಗದ್ಯಸಾಹಿತ್ಯವು ಹಲವು ಆಯಾಮಗಳನ್ನು ಒಳಗೊಂಡಿರುವಂತದ್ದು. ಇಂತಹ ಸಾಹಿತ್ಯದಲ್ಲಿ ಗಾದೆಗಳು ಒಗಟುಗಳು, ಒಡಪುಗಳು, ಕಥೆಗಳು ಇತ್ಯಾದಿಗಳನ್ನು ಕಾಣಬಹುದು.

ಪ್ರಸ್ತುತ ಲೇಖನದಲ್ಲಿ ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಜನಪದ ಗದ್ಯ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಅವಲೋಕಿಸಲಾಗಿದ್ದು, ತಾಲ್ಲೂಕಿನಲ್ಲಿ ಜನಪದ ಸಾಹಿತ್ಯದ ಹುಟ್ಟಿಗೆ ಹೊಲಗದ್ದೆಗಳಲ್ಲಿನ ದುಡಿಮೆ, ಹಬ್ಬಹರಿದಿನಗಳು, ಜಾತ್ರೆಯ ಆಚರಣೆಯ ಭಾಗವಾಗಿ, ಮಹದೇಶ್ವರ ಮತ್ತು ಮಂಟೇಸ್ವಾಮಿಯ ಆಚರಣೆಗಳು, ಜನಪದರ ಮನಸ್ಸಿನ ಹತಾಶೆ, ಸಿಟ್ಟು, ಸಂತೋಷಗಳು, ನಿತ್ಯ ಜೀವನದ ಜಂಜಾಟಗಳು, ಸಹಜೀವನ, ಗ್ರಾಮೀಣ ಜನಜೀವನ ಕಾರಣವಾಗಿವೆ ಎಂದು ಸರಳವಾಗಿ ಹೇಳಬಹುದು.

## KEYWORDS:

ತಾರ್ಕಿಕ, ಭೇರಿದುಂದುಭಿ, ನಗಾರಿ ಹಂಗು, ಬಿದಿರಿನ ತಟಿಕೆ ಒಕ್ಕಲು, ದೇವರಗುಡ್ಡ, ಆರ್ಕಡ್ಡಿ ಕ್ವಾಲಗಡ್ಡಿ, ತಟ್ಕದ್ಧಿ ಓನಾಟು ಭೂತಾಳೆ, ಹಾಲವಾಣ.

**ಅ) ಗಾದೆಗಳು**

ಜನಪದ ಸಾಹಿತ್ಯದಲ್ಲಿ ಅತ್ಯಂತ ಹೆಚ್ಚು ಜನಪ್ರಿಯವಾದ ಮತ್ತು ಬಳಕೆಯಲ್ಲಿರುವುದು ಗಾದೆಗಳು. ಜನಪದರ ವಿಶ್ವಕೋಶದಂತಿರುವ ಈ ಗಾದೆಗಳು ಅವರ ಬದುಕಿನ ಅನುಭವದಿಂದ ಮತ್ತು ಜೀವನ ದರ್ಶನದಿಂದ ಹುಟ್ಟಿಕೊಂಡ ಅಮೃತ ಸಂಜೀವಿನಿಯಂತೆ. ಒಂದು ದಿನವೆಲ್ಲ ಹೇಳುವ ಮಾತನ್ನು ಒಂದು ಗಾದೆ ಹೇಳಬಲ್ಲದು. ಆದ್ದರಿಂದಲೇ ಅವುಗಳಿಗಿರುವ ಶಕ್ತಿ, ಸತ್ವ, ಚೈತನ್ಯ ಮತ್ತು ನಿರಂತರತೆಗಳಿಂದಾಗಿ ಇಂದಿಗೂ ಜನಮಾನಸದಲ್ಲಿ ಬೆಳಗುತ್ತಿರುವುದು. ‘‘ಸಾಮಾನ್ಯ ಬಳಕೆಯಲ್ಲಿರುವ ಸಂಕ್ಷಿಪ್ತವಾದ ಸೂತ್ರ ಪ್ರಾಯವಾದ ಹೇಳಿಕೆ ಇದು. ಅನುಭವ ಮತ್ತು ವೀಕ್ಷಣೆಯಿಂದ ಗೊತ್ತಾದ, ಸರ್ವರಿಗೂ ಚಿರಪರಿಚಿತವಾದ ಕೆಲವು ಸತ್ಯಗಳನ್ನು ಅಭಿವ್ಯಕ್ತಿಸುವ ಸಂಕ್ಷಿಪ್ತ ವಾಕ್ಯವನ್ನು ಗಾದೆ ಎನ್ನಲಾಗಿದೆ’’.[1] ಬದುಕಿನ ತಿಳುವಳಿಕೆಯನ್ನು ವಿಸ್ತಾರಗೊಳಿಸುವಂತಹ ಶಕ್ತಿಯಿರುವುದು ಗಾದೆಗಳಿಗೆ. ಆದ್ದರಿಂದಲೇ ಜಗತ್ತಿನ ಎಲ್ಲ ದೇಶಗಳಲ್ಲೂ, ಭಾಷೆಗಳಲ್ಲೂ ಗಾದೆಗಳಿರುವುದನ್ನು ಕಾಣಬಹುದು. ಇಂತಹ ಗಾದೆಗಳು ಸಮುದಾಯವೊಂದರ ಸಾಂಸ್ಕೃತಿಕ ಮೌಲ್ಯಗಳನ್ನು, ಜೀವನ ದರ್ಶನವನ್ನು ಒಳಗೊಂಡಿರುವಂತವು. ವ್ಯಕ್ತಿ, ಸಮುದಾಯ, ವ್ಯವಸ್ಥೆ ಇವುಗಳನ್ನು ತಿದ್ದುವ, ಮಾರ್ಗದರ್ಶನ ಮಾಡುವ, ಧೈರ್ಯ ತುಂಬುವ ಶಕ್ತಿ ಗಾದೆಗಳಿಗಿದೆ.

ಹಾಗಾಗಿಯೇ ಗಾದೆಗಳು ಪರಂಪರೆಯಿಂದ ಬಂದು ಸಮುದಾಯಗಳ ಒಟ್ಟು ಬದುಕಿನ ಸಾರರೂಪದಲ್ಲಿ ಹುಟ್ಟಿಕೊಂಡಿರುವಂತಹವುಗಳು ಎಂದು ಹೇಳಬಹುದು. ಗಾದೆಗಳಿಂದ ನಂಟು ಬೆಳೆಯುತ್ತದೆ. ಗಂಟು ಉಳಿಯುತ್ತದೆ. ಗಾದೆಗಳನ್ನು ಕುರಿತು ಮಾಸ್ತಿಯವರು ‘‘ಗಾದೆಯನ್ನು ಕೇಳಿದ ಜನ ಅದರ ದಿಟಕ್ಕೆ, ಚೆಲುವಿಗೆ ಮನಸೋತು ಅದನ್ನು ನೆನಪಿನಲ್ಲಿಟ್ಟು ಕೊಳ್ಳುತ್ತಾರೆ. ಉಪಯೋಗಿಸುವ ಸಂದರ್ಭ ಮತ್ತೆ ಬಂದಾಗ ಅದನ್ನು ಉದಾಹರಿಸುತ್ತದೆ. ಹೀಗಾಗಿ ಆ ನುಡಿ–ನಾಡು ನುಡಿಯಾಗಿ ಬೆಲೆ ಪಡೆಯುತ್ತದೆ. ನಾಣ್ಯವಾಗಿ ನಡೆಯುತ್ತದೆ’’[2] ಎಂದಿದ್ದಾರೆ. ಪ್ರಸ್ತುತ ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಗಾದೆಗಳನ್ನು 1) ವೃತ್ತಿ ಜಾತಿಯಾಧಾರಿತ ಗಾದೆಗಳು 2) ಸ್ತ್ರೀ ಪ್ರಧಾನ ಗಾದೆಗಳು 3) ಸಾಮಾಜಿಕ ನೀತಿ ಪ್ರಧಾನ ಗಾದೆಗಳು ಎಂದು ವರ್ಗೀಕರಿಸಬಹುದು.

**1) ವೃತ್ತಿ–ಜಾತಿಯಾಧಾರಿತ ಗಾದೆಗಳು:**

ಮಾಡುವ ಕೆಲಸ ಹಾಗೂ ಹುಟ್ಟಿದ ಜಾತಿಯ ಕಾರಣಕ್ಕೆ ಕೆಲವು ಗಾದೆಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು. ಅಂದರೆ ಗ್ರಾಮೀಣ ಭಾಗದಲ್ಲಿ ವೃತ್ತಿಯನ್ನು ಗುರುತಿಸುವುದೇ ಜಾತಿಗಳಿಂದ. ಈ ನಿಟ್ಟಿನಲ್ಲಿ ರಾಮನಗರ ತಾಲ್ಲೂಕಿನಲ್ಲಿ ವೃತ್ತಿ–ಜಾತಿಯಾಧಾರಿತ ಗಾದೆಗಳನ್ನು ಮುಂದಿನಂತೆ ಗುರುತಿಸಲಾಗಿದೆ.

**ಹೊಲೆಯನಿಗೆ ಹೊತ್ತರಿಯದು, ಮಾದಿಗನಿಗೆ ಮಧ್ಯಾಹ್ನ ಅರಿಯದು**

ಈ ಗಾದೆಯನ್ನು ಎರಡು ಅಸ್ಪೃಶ್ಯ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ರಚನೆ ಮಾಡಲಾಗಿದೆ. ಈ ಸಮುದಾಯಗಳು ಊರಿನ ಕೆಲಸಕಾರ್ಯಗಳನ್ನು ಮಾಡುವಾಗ ಇವರಿಗೆ ಸಮಯಕ್ಕೆ ಮಿತಿ ಇರಲಿಲ್ಲ. ಈ ಎರಡು ಸಮುದಾಯಗಳಲ್ಲಿ 'ಸಮಯ ಪ್ರಜ್ಞೆ' ಇಲ್ಲದಿರುವುದನ್ನು ಕೂಡಾ ಗಾದೆ ಹೇಳಿದಂತಿದೆ.

**ಬೇಡ ಕಳ್ಳ ಮಾದಿಗ ಸುಳ್ಳ**

ಜಾತಿ ನಿಂದಕ ಗಾದೆಯಲ್ಲಿ ಮಾದಿಗ ಸಮುದಾಯದ ಜನರು ಶ್ರಮ ಜೀವಿಗಳಾಗಿ ಕತ್ತೆ ದುಡಿತದಿಂದ ತಪ್ಪಿಸಿಕೊಳ್ಳಲು ವಿಶ್ರಾಂತಿಯನ್ನು ಬಯಸುತ್ತಿದ್ದರೆನಿಸುತ್ತದೆ. ಆ ಸಮಯಕ್ಕೆ ಕೆಲಸಕ್ಕೆ ಕರೆಯಲು ಬಂದವರಿಗೆ ಸುಳ್ಳನ್ನು ಹೇಳಿರಬೇಕೆನಿಸುತ್ತದೆ. ಈ ಕಾರಣದಿಂದಲೇ ಈ ಗಾದೆಯು ಈ ಸಮುದಾಯಕ್ಕೆ ಅಂಟಿದ ಕಳಂಕದ ರೀತಿಯಲ್ಲಿ ರೂಡಿಯಲ್ಲಿರುವುದನ್ನು ಕಾಣುತ್ತೇವೆ.

**ತೊಗಲು ಮುಕಳಿಯವ ಏನು ಬಲ್ಲ, ಮುಗಿಲು ಮೇಗಳ ಸುದ್ದಿಯ**

ಈ ಗಾದೆಯಲ್ಲಿ ಮಾದಿಗ ಸಮುದಾಯದ ವೃತ್ತಿಯಾದ ಚರ್ಮ ತೆಗೆದು, ಹದ ಮಾಡುವ ಕರ್ಯದಲ್ಲಿ ನಿರತನಾಗಿದ್ದು ಬೇರೆ ವಿಷಯಗಳ ಬಗ್ಗೆ ಹೇಗೆ ತಿಳಿಯ ಬೇಕು ಎಂಬುದನ್ನು ಹೇಳುತ್ತಿದೆ. ಅದೇನು ಎಲ್ಲರೂ ನೋಡುವಂತಹ ಸ್ಥಳದಲ್ಲಿ ಮಾಡುವ ಕೆಲಸವಲ್ಲವಾದ್ದರಿಂದ ಊರಾಚೆ ಯಾವುದೂ ಬಯಲಲ್ಲಿ ಇದ್ದರೆ, ಊರಿನ ಸುದ್ದಿಗಳು ಇವರಿಗೆ ಹೇಗೆ ತಿಳಿಯಬೇಕು. ಜೊತೆಗೆ ಮೇಲ್ಜಾತಿಯವರ ಕೇರಿಗೂ ನಿಷೇಧವಿದ್ದ ಕಾರಣ, ಹೊರಜಗತ್ತಿನ ಸುದ್ದಿಗಳಿಂದಲೂ ವಿಮುಖರಾದ ಕಾರಣ ಇಂತಹ ಗಾದೆಯು ಹುಟ್ಟಿ ಕೊಂಡಿರಬೇಕು.

**ಏಳೂರು ಮಾದಿಗರು ಸೇರಿಕೊಂಡು ತೊಗಲು ಹದಗೆಡಿಸಿದರು**

ಈ ಗಾದೆಯು ಮಾದಿಗ ಸಮುದಾಯದವರನ್ನು ಒಟ್ಟಾಗಿ ಸೇರದೇ ಇರುವ ಹಾಗೇ ಭಾವಿಸಿದಂತಿದೆ. ಜೊತೆಗೆ ಚರ್ಮ ಬಿಡಿಸುವ ಕೆಲಸ ಅತಿ ಸೂಕ್ಷ್ಮದ್ದಾಗಿದ್ದು ನುರಿತವನೊಬ್ಬ ಬಿಡಿಸಿದರೆ ಚರ್ಮ ಸಿಗುತ್ತದೆ. ಇಲ್ಲವಾದಲ್ಲಿ ಎಲ್ಲರೂ ಕೈ ಹಾಕಿ ಚರ್ಮ ಬಿಡಿಸಲು ಹೋದರೆ ಚರ್ಮ ಸಿಗದೇ ಹೋಗಬಹುದು. ಈ ಕಾರಣದಿಂದಲೇ ಇಂತಹ ಗಾದೆಯೊಂದು ಹುಟ್ಟಿಕೊಂಡಿರಬೇಕು. ಹೀಗೆ ಬಿಡಿಸಿದ ಚರ್ಮ ಯಾವುದಕ್ಕೂ ಉಪಯೋಗಕ್ಕೆ ಬಾರದೇ ಹೋಗಬಹುದು. ಆದ್ದರಿಂದಲೇ ಈ ಗಾದೆಯು ವೃತ್ತಿಯಲ್ಲಿ ಸೂಕ್ಷ್ಮತೆ ಮತ್ತು ಈ ಸಮುದಾಯದವರು ಒಟ್ಟಾಗಿಲ್ಲದಿರುವುದನ್ನು ಹೇಳುತ್ತಿದೆ.

**ವಾಜನ ಮಾತು ಗಾಜೂ ಗೂಜು**

ಈ ಗಾದೆಯಲ್ಲಿ ಅಕ್ಕಸಾಲಿಗರ ವೃತ್ತಿಯ ಬಗೆಗಿನ ಅಸ್ಪಷ್ಟತೆಯನ್ನು ಹೇಳುತ್ತಿದೆ.

ಇವರು ಮಾಡುವ ಕೆಲಸ ಮತ್ತು ಹೇಳುವ ಮಾತಿನಲ್ಲಿ ವ್ಯತ್ಯಾಸಗಳಿರುತ್ತವೆ. ಸ್ವಂತ ಹೆಂಡತಿಯ ಚಿನ್ನವನ್ನೇ ಬೇಕಾದರೂ ಸ್ವಲ್ಪ ಎತ್ತಿಕೊಳ್ಳುವಂತವರು ಈ ಕಾರಣಕ್ಕಾಗಿಯೇ ಇಂತಹದೊಂದು ಗಾದೆ ಹುಟ್ಟಿಕೊಂಡಿದೆ ಎಂದೆನಿಸುತ್ತದೆ.

**ಅಗಸ ನೀರಲ್ಲಿ ನಿಂತು ಕೈಲಾಸದ ಕನಸ ಕಂಡನಂತೆ**

ಈ ಗಾದೆಯ ತಾನು ಮಾಡುವ ಕೆಲಸದ ಬಗ್ಗೆ ಯೋಚಿಸದೇ ನೀರಿನಲ್ಲಿದ್ದೇನೆ ಎಂಬ ಕಾರಣಕ್ಕಾಗಿ ಕೈಲಾಸದ ಕನಸನ್ನು ಕಾಣುತ್ತಾನೆ. ಅಸಂಭವವವಾದುದ್ದನ್ನು ಪಡೆಯುತ್ತೇನೆ ಎಂಬ ಆಸೆಯೊಂದು ಈ ಗಾದೆಯಲ್ಲಿರುವುದು ವ್ಯಕ್ತವಾಗುತ್ತದೆ. ಇಂತಹ ಜಾತಿ–ವೃತ್ತಿ ಆಧರಿಸಿ ಗಾದೆಗಳು ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ.

**ಗೌಡ ಅಂತ ಕರೆದರೆ, ಓ ಅಂದನಂತೆ, ಒಂದಾಳಿಗೆ ಹಿಟ್ಟು ಅಂದರೆ ಮಾತಿಲ್ಲ ಕತೆಯಿಲ್ಲ**

ಈ ಗಾದೆಯು ಹಸಿದಿದ್ದ ವ್ಯಕ್ತಿ ಊರಿನ ಗೌಡ ಊಟನೀಡುತ್ತಾನೆ ಎಂಬ ಭರವಸೆಯೊಂದಿಗೆ ಗೌರವವಾಗಿ ಕರೆದಾಗ ಓಗೊಡುವ ಗೌಡ, ಊಟವೆಂದಾಗ ಕೊಡದೇ ಸುಮ್ಮನಾಗುವುದನ್ನು ಕಾಣಬಹುದು. ಗೌಡನಾದವನಿಗೆ ಬರೀ ಪ್ರತಿಷ್ಠೆ, ತೋರ್ಪಡಿಕೆ ಇದ್ದರಷ್ಟೇ ಸಾಲದು ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು ಎನ್ನುವುದನ್ನು ಈ ಗಾದೆಯು ಹೇಳುತ್ತಿದೆ. ಇನ್ನಿತರ ಜಾತಿ ವೃತ್ತಿಸಂಬಂಧಿ ಗಾದೆಗಳು ಹೀಗಿವೆ:

- ಕುರಿ ಕಾಯೋ ಕುರುಬ ಅಂದ್ರೇ ಸಂಬಳ ಎಷ್ಟು ಅಂದ್ನಂತೆ
- ಕುರಿ ಕೊಬ್ಬಿದರೆ ಕುರುಬನಿಗೆ ಲಾಭ
- ಕಜ್ಜಿ ಹೋದರು ಕಡಿತ ಹೋಗಲ್ಲ, ಕಸಬು ಹೋದರು ವರಸೆ ಹೋಗಲ್ಲ
- ಹಾಳೂರಿಗೆ ಉಳಿದವನೇ ಗೌಡ
- ಮಾದಿಗಿತ್ತಿ ಮೊಲೆ ಚೆಂದ ಒಕ್ಕಲಿಗಿತ್ತಿ ಒಗೆತನ ಚೆಂದ
- ಒಡವರಿಗೆ ಒಡವೆ ಕೊಟ್ಟರೆ ಮಾದ್ಲಗಿತ್ತಿಗೆ ಮುನಿಸು ಬಂತಂತೆ.
- ಬಡಗಿ ಮನೆ ಸಟ್ಟುಗ ತೂತು
- ಆಳು ಮೇಲೆ ಆಳು ಬಿದ್ದು ದೋಣಿ ಬರಿದಾಯ್ತು
- ಹೊಲೆಯರ ಹೊಟ್ಟೇಲಿ ಹಾಕಿ ಮಾದಿಗರ ಹೊಟ್ಟೇಲಿ ತೆಗೆದಂತೆ
- ಅಕ್ಕಸಾಲಿಗ ಅಕ್ಕನ ಒಡವೆನೂ ಕದಿಯದೇ ಬಿಡನು

**2) ಸ್ತ್ರೀ ಆಧಾರಿತ ಗಾದೆಗಳು:**

ಹೆಣ್ಣು ತನ್ನ ಬದುಕಿನಲ್ಲಿ ವಿವಿಧ ರೀತಿಯ ಮಜಲುಗಳನ್ನು ದಾಟುತ್ತಾಳೆ. ಬಾಲ್ಯದಲ್ಲಿ ತವರು ಮನೆಯಲ್ಲಿ, ನಂತರ ಕೊಟ್ಟ ಮನೆಯಲ್ಲಿ ಸೊಸೆಯಾಗಿ,

ಹೆಂಡತಿಯಾಗಿ, ಅತ್ತೆಯಾಗಿ ಹೀಗೆ ಅನೇಕ ಪಾತ್ರಗಳಲ್ಲಿ ಬದುಕುತ್ತಾಳೆ. ಇಂತಹ ಸಂದರ್ಭದಲ್ಲಿಯೇ ಅನೇಕ ಪ್ರತಿರೋಧಗಳು, ಕಷ್ಟಗಳು, ನೋವು ನಲಿವುಗಳು ಎದುರಾಗಿ ಅವೆಲ್ಲವನ್ನೂ ಸಮಾಧಾನವಾಗಿ ಎದುರಿಸುವ ಅನಿವಾರ್ಯತೆ ಹೆಣ್ಣಿಗಿರುತ್ತದೆ. ಈ ಕಾರಣದಿಂದಲೇ ಅತೀ ಹೆಚ್ಚು ಗಾದೆಗಳು ಸೃಷ್ಟಿಯಾಗಿರುವುದು ಸ್ತ್ರೀ ಆಧಾರಿತ ಗಾದೆಗಳು ಮತ್ತು ಗಾದೆಗಳನ್ನು ಬಳಕೆ ಮಾಡುವುದು ಹೆಣ್ಣು ಮಕ್ಕಳೇ ಹೆಚ್ಚು. ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಸ್ತ್ರೀ ಕುರಿತಾದ ಕೆಲವು ಗಾದೆಗಳೆಂದರೆ:

» ಒಂದು ಮಗು ಮಗುವಲ್ಲ, ಒಂದು ಕಣ್ಣು ಕಣ್ಣಲ್ಲ
» ನುಗ್ಗೆ ಮರನ ಮುರಿದು ಬೆಳಸು, ಮಕ್ಕಳನ್ನು ಹೊಡೆದು ಬೆಳೆಸ ಬೇಕು
» ಹೊಸದರಲ್ಲಿ ನನ್ನ ಗಂಡ ಕಸ ಹೊಡಿಸ, ನೀರು ತರಿಸಾ, ಬರ್ತಾ ಬರ್ತಾ ಕಸದ ಪೊರಕೆ ತಗೊಂಡ
» ಗಂಡ ಇದ್ದೋಳು ಗಂಡುಮಗ ಹೆತ್ತರೆ, ಮುಂಡೇಗೆ ಬಂತಂತೆ ಮುಳುಕಾಟ
» ಗಂಡು ಕುತೂ ಕೆಟ್ಟ, ಹೆಣ್ಣು ತಿರುಗಿ ಕೆಟ್ಟಳು
» ಮೂರು ಬಿಟ್ಟೋಳು ಊರಿಗೆ ದೊಡ್ಡೋಳು
» ಗಂಡನ ಕೈಲಿ ಹಣ ನಿಲ್ಲದು, ಹೆಂಗಸ ಬಾಯಲ್ಲಿ ಮಾತು ನಿಲ್ಲದು
» ಊರಿಗೆ ಬಂದವಳು ನೀರಿಗೆ ಬರದೆ ಇರ್ತಾಳಾ?
» ಕುಣಿಯಲಾರದವಳು ನೆಲ ಡೊಂಕು ಅಂದ್ಲಂತೆ
» ಗದ್ದೆಗೆ ತೆವರಿ ಇರಬೇಕು, ಹೆಣ್ಣಿಗೆ ತವರು ಇರಬೇಕು
» ಕುಟುಕೊ ಮಳೆ ಬೇಡ – ಲೊಚಗುಟ್ಟೋ ಹೆಂಡ್ರು ಬೇಡ
» ಕೂಲಿ ಮಾಡಿ ಕುಡಿಕೆಗೆ ಹಾಕಲಿಲ್ಲ – ಹಾದರ ಮಾಡಿ ತೊಟ್ಟಿಲು ಕಟ್ಟಲಿಲ್ಲ
» ಈ ಮೋರೆ ಹೊತ್ತೋಲು ಸೋಮಾರ ಮಾಡ್ತಾಳ
» ಕತ್ತೆ ಮರೀಲಿ ಚೆಂದ, ಅತ್ತೆ ಹೊಸದರಲ್ಲಿ ಚೆಂದ
» ಅಳುವ ಗಂಡನ್ನ, ನಗುವ ಹೆಂಗಸನ್ನ ನಂಬಬಾರದು
» ತಾಯಿ ಇರೋ ತನಕ ತವರು – ಇರೋತನಕ ಪೊಗರು
» ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ
» ಅತ್ತೆ ಮೇಲಿನ ಕೋಪ ಕೊತ್ತಿ ಮೇಲೆ
» ಅಪ್ಪನ ಅರಮನೆಗಿಂತ ಗಂಡನ ಕಿರುಮನೆ ಲೇಸು
» ಬಾಯಿ ಕಲ್ತೋಳು ಬರದಲ್ಲೂ ಗೆದ್ದಳು
» ಮಾಡೋ ಕೆಲ್ಸ ಬಿಟ್ಟು ಆಡೋ ದಾಸಯ್ಯನ ಜೊತೆ ಹೋದಳಂತೆ
» ಅಮ್ಮನೋರು ಪಟ್ಟಕ್ಕೆ ಬರೋದರಲ್ಲಿ ಐನೋರು ಚಟ್ಟಕ್ಕೆ ಬಂದರಂತೆ
» ಹಿಡಿದವನಿಗೆ ಹೆಂಡತಿ, ಬಿಟ್ಟೋನಿಗೆ ಸೂಳೆ

» ಗಂಡನಿಗೆ ಗಂಟು ತೋರಿಸಬೇಡ, ಮಕ್ಕಳಿಗೆ ಸಿಹಿ ತೋರಿಸಬೇಡ

### 3) ಸಾಮಾಜಿಕ ನೀತಿ ಪ್ರಧಾನ ಗಾದೆಗಳು:

ಸಮಾಜದಲ್ಲಿರುವ ಹಲವು ಕೆಡಕುಗಳು, ನೀತಿಗಳು, ಸಂಪ್ರದಾಯ, ನಡವಳಿಕೆ ಮುಂತಾದ ವಿಷಯಗಳನ್ನು ಕುರಿತು ಹೇಳುವಂತಹ ಗಾದೆಗಳನ್ನು ಸಾಮಾಜಿಕ ನೀತಿ ಪ್ರಧಾನ ಗಾದೆಗಳು ಎಂದು ಕರೆಯಬಹುದು. ಇಂತಹ ಗಾದೆಗಳು ಸಮಾಜದಲ್ಲಿನ ಅಂಕು ಡೊಂಕುಗಳನ್ನು ತಿದ್ದುವಂತಹುದಾಗಿದೆ. ವೈಯುಕ್ತಿಕ ಬದುಕು ಮತ್ತು ಸಾರ್ವಜನಿಕ ಬದುಕಿನ ನಡುವೆ ಇರಬಹುದಾದ ಮೌಲ್ಯಗಳು, ಆದರ್ಶಗಳು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಈ ಗಾದೆಗಳು ಹೇಳುತ್ತವೆ. ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಸಾಮಾಜಿಕ ನೀತಿ ಪ್ರಧಾನ ಗಾದೆಗಳೆಂದರೆ:

» ಬಾಯಿ ಒಳ್ಳೆಯದಾದರೆ ಊರು ಒಳ್ಳೇಯದು
» ಮಾತೇ ಮುತ್ತು, ಮಾತೇ ಮೃತ್ಯು
» ಹೂ ತರಲು ಹೋದ ಹೊನ್ನೇಗೌಡ ಮದ್ವೆ ಆದ ಆರು ತಿಂಗಳಿಗೆ ಬಂದನಂತೆ
» ಇವತ್ತು ಸೊಳ್ಳೆ ಕಚ್ಚಿದ್ದಕ್ಕೆ ನಾಳೆ ಕೆರೆದುಕೊಂಡನಂತೆ
» ಮನೆಮನೆ ಮುದ್ದೆ ಮಾರಿ ಗುಡಿ ನಿದ್ದೆ
» ಇದ್ರೆ ಈ ಊರು ಎದ್ದರೇ ಮುಂದಿನ ಊರು
» ದೊರೆ ಮುನಿದರೂ ನೆರೆ ಮುನಿಬಾರದು
» ಮನೆಗೊಂದು ನೆರೆಮನೆ ಇರಬೇಕು
» ಮುಂಗೈ ಆಡುವ ತನಕ ಊರೆಲ್ಲ ನೆಂಟರು
» ಅನ್ನ ಹಾಕಿ ಸಾಕು ಎನಿಸಬಹುದು, ಹಣಕೊಟ್ಟು ಸಾಕು ಎನಿಸಲಾಗದು
» ತುಸು ತಿಂದರೂ ಕಸ ತಿನ್ನ ಬೇಡ
» ನೀರು ಇದ್ದರೆ ಊರು–ನಾರಿ ಇದ್ದರೆ ಮನೆ
» ಮೂರು ವರ್ಷದ ಬುದ್ದಿ, ನೂರು ವರ್ಷದವರೆಗೆ
» ಬೆಂಕಿ ಇಲ್ಲದೇ ಹೊಗೆಯಾಡಿತೇ?
» ಉಪ್ಪಿಕ್ಕಿದವರನ್ನು ಮುಪ್ಪಿನ ತನಕ ನೆನೆ
» ರಟ್ಟೆ ಮುರಿದು, ರೊಟ್ಟಿ ತಿನ್ನು
» ಕಪ್ಪೆ ಕೂಗಿದರೆ ಕೆರೆ ತುಂಬಿತೇ?
» ಆಸೆ ಹಿಡಿದ ಮನುಷ್ಯನನನ್ನು ಭಯ ತಿನ್ನುತ್ತೆ
» ಕಜ್ಜಿ ಇದ್ದೋರಿಗೆ ಲಜ್ಜೆ ಇಲ್ಲ
» ಇದ್ದಾಗ ಹಿರಿಯಬ್ಬ ಇಲ್ಲದಾಗ ತಿರಿಯಬ್ಬ
» ಅಡಿಗೆ ಗುಣ ಸಾರಿನಲ್ಲಿ ನೋಡು, ಮಡಿಕೆ ಗುಣ ಫಲದಲ್ಲಿ ನೋಡು
» ಅಜ್ಜಾ ಮದುವೆ ಅಂದರೆ ಯಾರಿಗೆ ನನಗಾ? ಅಂದನಂತೆ

- ಅಭಿಲಾಷೆ ಇಲ್ಲದವನನ್ನು ಶುಭ ಲಗ್ನದಲ್ಲಿ ಮದುವೆಯಾದರೇನು?
- ಅವಳ ಪಾವಿತ್ರ್ಯ ಗಂಡ ಸತ್ತ ಮೇಲೆ ತಿಳೀತು
- ಊರೆಲ್ಲ ಉರಿದ ಮೇಲೆ ನೀರು ತಂದರಂತೆ
- ಅನ್ನ ಹಾಕಿದ ಮನೆ ಹಾಳಾಗಲ್ಲ, ಗೊಬ್ಬರ ಹಾಕಿದ ಹೊಲ ಕೆಡಲ್ಲ
- ಊರಿಗೆಲ್ಲ ಒಂದಾರಿ ಆದ್ರೆ, ನಮ್ಮನೆ ಎಡ್ವಟ್ಟನಿಗೆ ಒಂದು ದಾರಿ
- ಇಕ್ಕಲಾರದ ಕೈ, ಎಂಜಲು ಎಂದನಂತೆ
- ದೇಶಾಂತ್ರ ಹೋದ್ರು ಸ್ವತಂತ್ರವಾಗಿ ಹೋಗ್ಬೇಕು
- ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಕ್ಕತ್ತಂತೆ
- ಊಟಕ್ಕೆ ಇಲ್ಲದ ಉಪ್ಪಿನ ಕಾಯಿ ಕತ್ತೆ ಶಾಟಕ್ಕಾ

**ಆ) ಒಗಟುಗಳು:**

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಗಟು ಕೂಡಾ ಒಂದು. ಇದು ಎಲ್ಲ ಸಮುದಾಯದ ಚಿಕ್ಕವ್ಯಕ್ತಿಗಳಿಂದ ಹಿಡಿದು ದೊಡ್ಡವರಾದಿಯಾಗಿ ಎಲ್ಲರೂ ಇದನ್ನು ಬಳಸುತ್ತಾರೆ. ಒಗಟು ಎಂಬುದನ್ನು 'ಒಡಚೊ ಕತೆ', 'ಒಡ್ಡೊಕತೆ' 'ಒಂಟು' ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. "ಒಗೆ ಎಂದರೆ ಎಸೆ ಎಂಬ ಅರ್ಥವಾದರೆ, ಒಗಟು ಪದಕ್ಕೆ ಸವಾಲು ಹಾಕು"[3] ಎಂದರ್ಥವಾಗುತ್ತದೆ. ಅಂದರೆ ಒಗಟನ್ನು ಹೇಳುವುದಕ್ಕೆ ಒಬ್ಬರಿದ್ದರೆ ಅದನ್ನು ಕೇಳಿಸಿಕೊಳ್ಳಲು ಮತ್ತೊಬ್ಬ ವ್ಯಕ್ತಿ ಇರಲೇ ಬೇಕು. ಜನಪದರಲ್ಲಿ ತಮ್ಮ ಸುತ್ತಮುತ್ತಲಿನ ಸಂಗತಿಗಳನ್ನು ಭಿನ್ನ ರೀತಿಯಲ್ಲಿ ಗ್ರಹಿಸಿ ಹೇಳುವ ಶಕ್ತಿ ಈ ಒಗಟುಗಳಿಗಿದೆ. ಆದ್ದರಿಂದಲೇ ಒಗಟುಗಳು ಒಂದು ರೀತಿಯಲ್ಲಿ ರೂಪಕದ ಮೂಲಕವೇ ವಸ್ತುವನ್ನು, ಸಂದರ್ಭವನ್ನು ಹೇಳುವಂತವುಗಳು. ಒಗಟುಗಳು ಕೇಳುಗನಲ್ಲಿ ಆಸಕ್ತಿ, ಕುತೂಹಲವನ್ನು ಕೆರಳಿಸುವಂತಹವುಗಳು. ಇಂತಹ ಒಗಟುಗಳಲ್ಲಿ ರಹಸ್ಯವಿರುತ್ತದೆ, ಭಿನ್ನರ್ಥವಿರುತ್ತದೆ, ದ್ವಂದ್ವಗಳಿರುತ್ತವೆ. ಒಗಟುಗಳು ಬುದ್ಧಿಯನ್ನು ಪ್ರಧಾನವಾಗಿಸಿಕೊಂಡ ಚಟುವಟಿಕೆ.

"ಸಾಮಾನ್ಯವಾಗಿ ಊಹೆಯ ಮೇಲೆ ಪರಿಹಾರ ಹುಡುಕುವ, ಎದುರಾಳಿಯ ಲೋಕಾನುಭವವನ್ನು ಒರೆಗಿಕ್ಕುವ, ಅರ್ಥಪೇಕ್ಷಿಯವಾದ ಪದ ಚಕ್ರವ್ಯೂಹ. ಬುದ್ಧಿ ಕೌಶಲ್ಯವನ್ನು ಒರೆಗೆ ಹಚ್ಚಿ ನೋಡುವ, ಇವುಗಳ ಸೃಷ್ಟಿಯ ಹಿನ್ನಲೆಯಲ್ಲಿ ವಿಶಿಷ್ಟವಾದ ಮನೋಧರ್ಮದ ಮಿಡಿತವನ್ನು ಕಾಣಬಹುದು ಒಂದರ್ಥದಲ್ಲಿ ಪ್ರತಿಯೊಂದು ಒಗಟು ಒಂದು ಪುಟ್ಟ ಭಾವಗೀತೆ".[4] ಆದ್ದರಿಂದಲೇ ಒಗಟುಗಳು ಸೃಷ್ಟಿಯಾಗಿರುವುದು ಬುದ್ಧಿಯ ಚಮತ್ಕಾರದಿಂದ. ಜನಪದರಲ್ಲಿರುವ ಇಂತಹ ಬುದ್ಧಿಯ ಜೊತೆಗೆ ಹಾಸ್ಯವು ಸೇರಿಕೊಂಡು ಅನೇಕ ಒಗಟುಗಳು ರೂಪುಗೊಂಡಿವೆ. "ಲೋಕ ಜ್ಞಾನ ಪರೀಕ್ಷೆ, ಸಮಸ್ಯೆ ಪರಿಹಾರ, ಸಾಮರ್ಥ್ಯ. ತಾರ್ಕಿಕ ಬುದ್ಧಿಯ ವಿಕಾಸ, ವಾಕ್ಚಾತುರ್ಯ, ಒಂದು ಜನಾಂಗದ ಸಂಸ್ಕೃತಿ ದರ್ಶನ, ಶಿಕ್ಷಣದ ಲಾಭ ಇವೇ ಮೊದಲಾದ ಪ್ರಯೋಜನಗಳು

ಸಿಗುವುದರಿಂದ ಒಗಟುಗಳು ಪ್ರಾಚೀನ ಕಾಲದಿಂದ ಲೋಕ ಪ್ರಿಯವಾಗಿವೆ."[5] ಎಂಬ ಮಾತಿನಲ್ಲಿ ಒಗಟುಗಿರುವ ಮಹತ್ವವನ್ನು ಹೇಳುತ್ತಿದೆ. ಆದ್ದರಿಂದ ಒಗಟಿನ ಮುಖ್ಯ ಉದ್ದೇಶವು ಜ್ಞಾನದ ಜೊತೆಗೆ ವಿವೇಕವನ್ನು ಹೇಳುವಂತಹವುಗಳು. ಒಗಟನ್ನು ಕಟ್ಟುವಂತಹವರು ಯಾವುದಾದರೊಂದು ವಸ್ತುವನ್ನು, ವ್ಯಕ್ತಿಯನ್ನು ಸಂದರ್ಭವನ್ನು ಆಧಾರವಾಗಿರಿಸಿಕೊಂಡು ತಮ್ಮ ಬುದ್ಧಿಯ ಮೂಲಕ ಅನೇಕ ರೀತಿಯ ಹೋಲಿಕೆಗಳನ್ನು ನೀಡಿ ಶಬ್ದಗಳ ಮೂಲಕ ಒಗಟನ್ನು ಹೊಸೆಯಬಹುದು. ಆದ್ದರಿಂದಲೇ "ಒಗಟುಗಳು ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ಪರಿಚಯಿಸುವುದರ ಜೊತೆಗೆ ಆ ಜನತೆಯ ಬುದ್ಧಿ, ವಿಡಂಬನಾ ಸ್ವಭಾವ, ಹಾಸ್ಯಪ್ರಜ್ಞೆ, ಬೋಧನಾ ಮನೋಧರ್ಮ ಇತ್ಯಾದಿಗಳನ್ನು ಚಿತ್ರಿಸುವುದು."[6]

ಬಹುಪಾಲು ಒಗಟುಗಳು ಲೋಕದಲ್ಲಿನ ವಸ್ತು ಸಂಗತಿಗಳನ್ನು ಒಳಗೊಂಡಿರುವಂತಹವುಗಳೇ ಹೊರತು ಅಮೂರ್ತವಾದ ಸಂಗತಿಗಳನಲ್ಲ. ಈ ಲೋಕದಲ್ಲಿರುವಂತಹುಗಳನ್ನೇ ಒಗಟನ್ನು ಮಾಡಲು ಬಳಸಿಕೊಳ್ಳುವುದು. ಒಂದನ್ನೊಂದು ಹೋಲಿಕೆ ಮಾಡಲು ಬಳಸಿಕೊಳ್ಳುವುದು. ಅಗಾಧವಾಗಿರುವ ವಸ್ತು ಪ್ರಪಂಚದಲ್ಲಿ ಸೃಷ್ಠಿಯಾಗುವ ಒಗಟುಗಳನ್ನು ವರ್ಗೀಕರಿಸುವುದು ಕಷ್ಟಸಾಧ್ಯ.

ಆದರೆ ಅರ್ಚರ್ ಟೈಲರನು ಈ ರೀತಿ ವಿಭಾಗಿಸಿದ್ದಾನೆ. "1) ಮಾನವ ಮತ್ತು ಪ್ರಾಣಿಗಳನ್ನು ಹೊರತುಪಡಿಸಿ ಮಿಕ್ಕ ಜೀವಿಗಳೊಡನೆ ಹೋಲಿಕೆ 2) ಪ್ರಾಣಿಗಳೊಡನೆ ಹೋಲಿಕೆ 3) ಮಾನವರೊಡನೆ ಹೋಲಿಕೆ 4) ಸಸ್ಯದೊಡನೆ ಹೋಲಿಕೆ 5) ವಸ್ತುವಿನೊಡನೆ ಹೋಲಿಕೆ".[7] ಆದರೆ ಇಂತಹ ವರ್ಗೀಕರಣಕ್ಕೆ ನಿಲುಕದ ಎಷ್ಟೋ ಒಗಟುಗಳಿವೆ. ಪ್ರಸ್ತುತ ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಒಗಟುಗಳನ್ನು ಅಧ್ಯಯನದ ದೃಷ್ಟಿಯಿಂದ ಈ ಕೆಳಕಂಡಂತೆ ವಿಂಗಡಿಸಿಕೊಳ್ಳಲಾಗಿದೆ.

1. ಪ್ರಾಣಿ-ಪಕ್ಷಿ ಸಂಬಂಧಿಸಿದ ಒಗಟುಗಳು
2. ಮನುಷ್ಯನ ಅಂಗಾಂಗಗಳಿಗೆ ಸಂಬಂಧಿಸಿದ ಒಗಟುಗಳು
3. ಮರ-ಗಿಡ ಸಂಬಂಧಿ ಒಗಟುಗಳು
4. ಇತರೇ ಚಮತ್ಕಾರಿಕ ಒಗಟುಗಳು

### 1) ಪ್ರಾಣಿ - ಪಕ್ಷಿ ಸಂಬಂಧಿ ಒಗಟುಗಳು:

ಮನುಷ್ಯನು ಅನಾದಿ ಕಾಲದಿಂದಲೂ ಪ್ರಾಣಿ-ಪಕ್ಷಿಗಳ ಜೊತೆ ಸಂಬಂಧ ಇಟ್ಟುಕೊಂಡವನು. ಮೂಲ ಮಾನವನ ಹಂತದಿಂದ ನಾಗರೀಕನೆನಿಸುವ ಹಂತಕ್ಕೆ ಬಂದು ನಿಲ್ಲುವವರೆಗೆ ಇವುಗಳ ಜೊತೆ ಸಂಬಂಧವನ್ನು ಇರಿಸಿಕೊಂಡಿದ್ದವನು. ಕಾಡಿನ ಪ್ರಾಣಿಗಳಾದ ಹುಲಿ, ಆನೆ, ಜಿಂಕೆ, ಸಿಂಹ, ನರಿ, ನವಿಲುಗಳಿಂದ ಹಿಡಿದು ಸಾಕುಪ್ರಾಣಿಗಳಾದ ಹಸು, ನಾಯಿ, ಹಂದಿ, ಕುರಿ, ಕೋಳಿ, ಬೆಕ್ಕುಗಳ ಒಡನಾಟವನ್ನು

ಬಲ್ಲವನು. ಇದರ ಜೊತೆಗೆ ಪಕ್ಷಿಗಳ ನಂಟು ಉಂಟು. ಈ ಕಾರಣದಿಂದಲೇ ಪ್ರಾಣಿ-ಪಕ್ಷಿ ಸಂಬಂಧಿಸಿದ ಅನೇಕ ಒಗಟುಗಳು ಈ ಸಮುದಾಯದವರಲ್ಲಿ ಮೈತಳೆದಿವೆ. ಕೆಲವೊಂದು ಒಗಟುಗಳು ಈ ಸಮುದಾಯದ ವೃತ್ತಿಯಾದ ಹೈನುಗಾರಿಕೆ ಕಾರಣದಿಂದ ಹುಟ್ಟಿಕೊಂಡಿವೆ. ಇಂತಹ ಕೆಲವು ಒಗಟುಗಳು ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿದ್ದು, ಅವುಗಳೆಂದರೆ:

» ಎರಡು ಕಾಲುಂಟು ನರನಲ್ಲ, ಕೆಂಪು ಕಿರೀಟವುಂಟು ರಾಜನಲ್ಲ, ವೇಳೆ ಹೇಳುವನು ಗಡಿಯಾರವಲ್ಲ, ಇದನರಿತು ಹೇಳುವವರು ಜಾಣರೆಲ್ಲ – ಹುಂಜ
» ಹಲ್ಲಿಲ್ಲದ ಹಕ್ಕಿಗೆ, ಗೂಡು ತುಂಬಾ ಮರಿಗಳು – ಕೋಳಿ
» ಒಂದು ಮನೆಗೆ ನಾಲ್ಕು ಊರು ಗಂಭ, ನಾಲ್ಕು ಹಾಲು ಗಂಭ, ಎರಡು ಕೋಡುಗಂಭ, ಒಂದು ಬಿಳಿಯ ಗಂಭ – ಹಸುಗಳು
» ಹಾರಿದರೆ ಹನುಮಂತ ಕೂತರೆ ಮುನಿ, ಕೂಗಿದರೆ ಕಾಡಿನೊಡೆಯ – ಕಪ್ಪೆ
» ಎರಡು ಮಿಣಿ ಮಿಣಿ, ಎರಡು ಲಟ-ಪಟ, ಎರಡು ಒಳಗಂಭ, ನಾಲ್ಕು ರಣ ಗಂಭ, ಒಂದು ಬೀಸೋ ದೊಣ್ಣೆ – ಹಸು
» ನಡು ಸಣ್ಣ ನಾಗರ ಬಣ್ಣ, ಹಿಡಿಯಲಿಕ್ಕೆ ಹೋದರೆ ಕಡೀಲಿಕ್ಕೆ ಬರುತ್ತೆ – ಕಡಜ
» ಗಡುಗು ಗುಡುಗಿದರೆ ಸಾವಿರಾರು ನಯನಗಳು ಅರಳುವುದು–ನವಿಲು
» ಬಿರುಬಿರನೆ ಹೋಗೋಳೆ, ಬಿಲ್ಲೆ ಸರದೋಳೆ, ನಿಂತು ಮಾತಾಡೆ ಗಂಧಗಾರ್ತಿ– ಹಾವು
» ಗೊಡೇಲಿ ಕರಿರೊಟ್ಟಿ ಸುಟ್ಟಿದ್ದಾರೆ – ಸೊಳ್ಳೆ
» ಕರಿಕಂಬಳಿ ನಂಟ, ರಾತ್ರಿ ಹೊತ್ತಿಗೆ ಹೊಂಟ – ಹೆಗ್ಗಣ
» ಗಿರಿರಾಜನ ಮಗಳ ಗಂಡನ ಹಿರಿಯ ಮಗನ ಸೋದರನ ವಾಹನ– ಇಲಿ
» ನಡು ಸಣ್ಣ ಸಿಂಹವಲ್ಲ, ಮೀಸೆಯುಂಟು ಇಲಿಯಲ್ಲ, ಗೂಡುಗಟ್ಟುವುದು ಪಕ್ಷಿಯಲ್ಲ, ಕಚ್ಚಿದರೆ ಉರಿಯುವುದು ಚೇಳಲ್ಲ– ಕಟ್ಟಿರುವೆ
» ದೇಹದಾದ್ಯಂತ ಮಚ್ಚೆ ಉಂಟು ಸರ್ಪವಲ್ಲ, ಉದ್ದನೆಯ ಕೊಂಬುಗಳುಂಟು ಹೋರಿಯಲ್ಲ, ನಾಗಲೋಟದಿಂದ ಓಡುವುದು, ಕುದುರೆಯಲ್ಲ, ಚಂಚಲ ದೃಷ್ಟಿಯುಂಟು ಚಿತ್ತಚಾಪಲ್ಯವಿಲ್ಲ–ಜಿಂಕೆ
» ಕಂಠದಲ್ಲಿ ಕಪ್ಪುಂಟು ಶ್ರೀಕಂಠನಲ್ಲ, ನೆತ್ತಿಯಲ್ಲಿ ಶಿಖೆಯುಂಟು ವಿಪ್ರನಲ್ಲ, ನಾಟ್ಯದಲ್ಲಿ ಒಲವುಂಟು ಊರ್ವಶಿಯು ಅವಳಲ್ಲ, ಮೈಯಲ್ಲಿ ಕಣ್ಣುಂಟು, ದೇವೇಂದ್ರನಲ್ಲ – ನವಿಲು

**2) ಮನುಷ್ಯನ ಅಂಗಾಂಗ ಸಂಬಂಧಿ ಒಗಟುಗಳು:**

ಮನುಷ್ಯನ ಅಂಗಾಂಗಗಳನ್ನು ಕುರಿತ ಕೆಲವು ಒಗಟುಗಳು ರಾಮನಗರ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿವೆ. ಅವುಗಳೆಂದರೆ:

» ಚಿಕ್ಕಗದ್ದೆಗೆ ನೂರೆಂಟು ದಾರಿ, ಅಣ್ಣತಮ್ಮಂದಿರು ಐದು ಜನ, ನಾನು ಯಾರು?–ಹಸ್ತರೇಖೆ, ಬೆರಳು, ಕೈ

- » ಕೋಟೆಯೊಳಗೆ ಮೂವತ್ತೆರಡು ಕಾವಲುಗಾರರು, ಹಾಗಾದರೆ ಅರ್ಯಾರು–ಹಲ್ಲುಗಳು
- » ಶಂಖು ಚಕ್ರದ ಬಾವಿ, ಬಾಗಿ ನೋಡಿದರೆ ಇದರಲ್ಲಿ ಕೆಸರುಂಟು, ನೀರಿಲ್ಲ, ಹಾಗಾದರೆ ನಾನು ಯಾರು– ಕಿವಿ
- » ಅಣ್ಣ ತಮ್ಮ ಇಬ್ಬರೂ – ನಾ ಮುಂದು – ತಾ ಮುಂದು ಎನ್ನುತ್ತಾರೆ. ಆದರೆ ಯಾರು ಮುಂದೆ ಹೋಗಲ್ಲ – ಕಾಲುಗಳು
- » ಎರಡು ಮನೆಗೆ ಒಂದೇ ಗೋಪುರ – ಮೂಗು
- » ಗೂಡಲ್ಲಿರುವ ಜೋಡಿ ಪಕ್ಷಿ ಊರೆಲ್ಲಾ ನೋಡುತ್ತೆ – ಕಣ್ಣು
- » ಆಡಿಸಿದರೂ ಆಡುತ್ತೆ, ಒದ್ದೆ ಮುದ್ದೆಯಾಗುತ್ತೆ, ಇದ್ದದ್ದನ್ನು ಹೇಳುತ್ತೇ, ಇಲ್ಲದನ್ನು ಹೇಳುತ್ತೆ, ಬೇಕು–ಬೇಡ ಅನ್ನುತ್ತೇ – ಬಾಯಿ
- » ಏರಿ ಮೇಲೆ ಸಾಲು ಮರ – ಹುಬ್ಬು
- » ಒಂದೇ ಗೂಡಲ್ಲಿ ಒಂದೇ ಕೊರಮ – ನಾಲಿಗೆ
- » ಕರೆಕಾಡು, ಬಿಳಿರೋಡು, ಕರಿಕುರಿಗಳು ಮೇಯುತ್ತವೆ – ತಲೆ ಮತ್ತು ಹೇನು
- » ಹುಟ್ಟುತ್ತಾ ನಾಲ್ಕು ಕಾಲು, ಬೆಳೆಯುತ್ತಾ ಎರಡು ಕಾಲು, ಮುಪ್ಪಲ್ಲಿ ಮೂರು ಕಾಲು – ಮನುಷ್ಯ

### 3) ಮರ–ಗಿಡ ಸಂಬಂಧಿ ಒಗಟುಗಳು:

ಪ್ರಕೃತಿಯಲ್ಲಿ ಮರ ಗಿಡ, ಹುಲ್ಲು ಕಟ್ಟಿಗಳಿಗೆ ಸಂಬಂಧಿಸಿದ ಒಗಟನ್ನು ಕಾಣಬಹುದು. ಭೂಮಿ, ಆಕಾಶ, ಸುತ್ತಲಿನ ಪರಿಸರದ ಬಗ್ಗೆ ಒಗಟುಗಳಲ್ಲಿ ಕಟ್ಟಿಕೊಟ್ಟಿರುವ ರೂಪಕ ಶಕ್ತಿ, ಅಸಾಧಾರಣವಾದದ್ದು. ಇಂತಹ ಕೆಲವು ಮರಗಿಡ ಸಂಬಂಧಿ ಒಗಟುಗಳು ಹೀಗಿವೆ:

- » ಹತ್ತಲಾರದ ಮರ ಕೊಯ್ಯಲಾರದ ಕಾಯಿ– ಭತ್ತ
- » ಮೊಟ್ಟೆ ಒಡೆಯೋ ಆಗಿಲ್ಲ, ಕೊಡ ಮುಳುಗಿಸೋ ಆಗಿಲ್ಲ, ಬರೀ ಕೊಡ ತಗೊಂಡು ಬರೋ ಹಾಗಿಲ್ಲ, ನಾನು ಯಾರು?– ತೆಂಗಿನಕಾಯಿ
- » ಹರೆಯದಲ್ಲಿ ಹಸಿರು, ಮಧ್ಯದಲ್ಲಿ ಕೆಂಪು, ಮುಪ್ಪಿನಲ್ಲಿ ಕಪ್ಪು–ನೇರಳೆ ಹಣ್ಣು
- » ಹಗ್ಗ ಹಾಸಿದೆ, ಎಮ್ಮೆ ಮಲಗಿದೆ – ಕುಂಬಳಕಾಯಿ
- » ಹಸಿರು ಆಸ್ಪತ್ರೆ, ಕೆಂಪು ಡಾಕ್ಟ್ರು, ಕಪ್ಪು ಮಾತ್ರೆ –ಕಲ್ಲಂಗಡಿ ಹಣ್ಣು
- » ಆಕಾಶದಲ್ಲಿ ಆಡೋ ಹುಡುಗ, ಹಿಟ್ಟಿನೊತ್ತಿಗೆ ಬಾರೋ ಪುಟ್ಟ ಹುಡುಗ – ಮಾವಿನ ಕಾಯಿ
- » ತೋಟದಲ್ಲಿ ಹುಟ್ಟೋದು, ತೋಟದಲ್ಲಿ ಬೆಳೆಯೋದು, ಊಟಕೆ ಮುಂಚೆ ಬರೋದು–ಬಾಳೆ ಎಲೆ
- » ಚೋಟುದ್ದ ಹುಡುಗನಿಗೆ ಕೆಂಪು ಗುಲಾಬಿ– ಮೆಣಸಿನ ಕಾಯಿ
- » ಒಂದು ಕೋಳಿ 900 ಮೊಟ್ಟೆ– ಅಡಿಕೆ ಕಾಯಿ ಮರ
- » ಏರಿ ಮೇಲೆ ಹೋಗೋ ಸುಂದ್ರೀನಾ ಎಣಿಸಬಹುದು. ಆದರೆ ಅವರ ನೆರಗಿನ ಎಣಿಸೋಕೆ ಆಗಲ್ಲ – ಅಣಬೆ

» ಅಂಗಡಿಯಿಂದ ತರೋದು, ಮುಂದೆ ಇಟ್ಟುಕೊಂಡು ಅಳೋದು – ಈರುಳ್ಳಿ
» ಚಿಕ್ಕಬೋರನಿಗೆ ಬಗಲಲ್ಲಿ ಕತ್ತಿ – ಹುರುಳಿಕಾಯಿ
» ಅಕ್ಕೊರ್‌ಗೆ ನಮ್ ಅಕ್ಕನ ಕೊಟ್ಟಿದ್ದೀವಿ, ನಕ್ಕದ್ರೆ ಕರ್ಕೊಂಡು ಬಾ, ನಗದೇ ಇದ್ರೆ ಅಲ್ಲೇ ಬಿಟ್ಟು ಬಾ – ಅರಳು ಕಾಯಿ
» ಸುಣ್ಣದ ಗುಡಿಯ ಸುತ್ತಲಾರೆ, ಬಣ್ಣದ ಚಿಟ್ಟೆಯ ಹಿಡಿಯಲಾರೆ, ದುಂಡನೆ ಮಲ್ಲಿಗೆ ಮುಡಿಯಲಾರೆ – ದಾಳಿಂಬೆ ಹಣ್ಣು
» ಗುಂಡು ಕಲ್ಲಿನಂತೆ ಗುಂಡಿಗಿರುವೆ, ಈ ಗುಂಡು ಕಲ್ಲಿನಲ್ಲಿ ಚಿನ್ನ ಬೆಳ್ಳಿ ನಾಣ್ಯಗಳಿವೆ. ನಾನ್ಯಾರು – ಹಲಸಿನ ಹಣ್ಣು

**ಇ) ಜನಪದ ಕಥೆಗಳು:**

ಜಾನಪದದ ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಜನಪದ ಕಥೆಯು ಬಹು ಮುಖ್ಯವಾದುದಾಗಿದೆ. ಜನಪದ ಕಥೆಗಳು ಮೂಲತಃ ಮಾನವನ ವೈಯುಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಫಲಗಳಾಗಿದ್ದು, ಪುರಾತನ ಸಂಸ್ಕೃತಿ ಮತ್ತು ಪರಂಪರೆಯ ಮೇಲೆ ಬೆಳಕು ಚೆಲ್ಲುತ್ತವೆ. ಹಾಗೆಯೇ ಸಂಸ್ಕೃತಿಯೊಂದನ್ನು ಅರಿಯಲು ಉಪಯುಕ್ತವಾದ ಹಿನ್ನೆಲೆಯನ್ನು ಒದಗಿಸುತ್ತವೆ. ಕಥೆಯನ್ನು ಹೇಳುವುದು ಮತ್ತು ಕೇಳುವುದು ಮಾನವ ಸಮಾಜ ಎಷ್ಟು ಪುರಾತನವಾದುದೋ ಅಷ್ಟೇ ಪುರಾತನವಾದುದಾಗಿದೆ. ಜನಪದರು ನಿತ್ಯ ದುಡಿಮೆಯ ಆಯಾಸ, ಬೇಸರವನ್ನು ನಿವಾರಿಸಿಕೊಳ್ಳಲು, ಬಿಡುವಿನ ವೇಳೆಯಲ್ಲಿ ನಿರಂತರವಾಗಿ ನಿರರ್ಗಳವಾಗಿ ಕಥೆಯನ್ನು ಹೇಳುತ್ತಿದ್ದರು. ಅವರು ಹೇಳುವ ಕಥೆಗಳು ಬದುಕಿಗೆ ಮನರಂಜನೆ ನೀಡುವುದರ ಜೊತೆಗೆ ಜೀವನಕ್ಕೆ ಆದರ್ಶ, ನೀತಿಗಳು ಹಾಗೂ ಮೌಲ್ಯಗಳು ನೀಡುವಂತಹ ಕಥೆಗಳನ್ನು ಹೇಳುವ ಕಲೆಯನ್ನು ಜನಪದರು ರೂಢಿಸಿಕೊಂಡಿದ್ದಾರೆ. ಜನಪದ ಕಥೆಗಳನ್ನು ಅಜ್ಜಿ ಕಥೆಯೆಂದೇ ಕರೆಯುವುದು ಹೆಚ್ಚು ರೂಢಿಯಾಗಿದೆ. ಏಕೆಂದರೆ ಕಥೆಯನ್ನು ಹೇಳುವುದರಲ್ಲಿ ಅಜ್ಜಿಯನ್ನು ಮೀರಿಸುವವರಿಲ್ಲ. ಹಾಗೆಯೇ ವಯಸ್ಸಾದವರು ತಾವು ಕೇಳಿದ, ಕಂಡ ಅನುಭವದ ಸಾರವನ್ನು ಕಥೆಗಳಲ್ಲಿ ಸ್ವಾರಸ್ಯಕರವಾಗಿ ನಿರೂಪಿಸುವಂತವರಾಗಿದ್ದಾರೆ. ಕಥೆ ಹೇಳಲು ಮತ್ತು ಕೇಳಲು ಯಾವುದೇ ವಯಸ್ಸಿನ ತಾರತಮ್ಯವಿಲ್ಲ. ಮಕ್ಕಳು, ಹೆಂಗಸರು, ವೃದ್ಧರು, ಗಂಡಸರು, ಎಲ್ಲರೂ ಇದನ್ನು ಕೇಳಬಹುದು ಮತ್ತು ಹೇಳಬಹುದು. ಜನಪದ ಕಥೆಗಳಲ್ಲಿ ಪ್ರಾದೇಶಿಕತೆಗೆ ಅನುಗುಣವಾಗಿ ಕೆಲವೊಂದು ಭಿನ್ನತೆಗಳು ಕಾಣಬಹುದು.

ಮೌಖಿಕ ಸಾಹಿತ್ಯವಾಗಿರುವ ಕಥೆಯು ಒಬ್ಬರಿಂದ ಮತ್ತೊಬ್ಬರಿಗೆ ಹರಿದು ಬರುವಾಗ ಅದರಲ್ಲಿ ಹಲವು ವ್ಯತ್ಯಾಸಗಳು ಉಂಟಾಗುತ್ತವೆ. ಚಾರಿತ್ರಿಕವಾಗಿ ಕಥೆಯಲ್ಲಿ ಕೆಲವು ಅಂಶಗಳು ಬಿಡಬಹುದು, ಅಥವಾ ಹೊಸದಾದ ಕೆಲವು ಅಂಶಗಳನ್ನು ಸೇರ್ಪಡೆ ಮಾಡಿಕೊಳ್ಳುತ್ತಾ ಸಾಗಬಹುದು. ಅಂದರೆ ಜನಪದ ಕಥೆಗಳು ಸಾಗಿ ಬರುವ

ಕಾಲದಲ್ಲಿ ಹಲವಾರು ಬದಲಾವಣೆಗಳು ಏರ್ಪಡುತ್ತವೆ. ಮೌಖಿಕ ಸಾಹಿತ್ಯದಲ್ಲಿ ಜನಪದ ಕಥೆಗಳು ಬಹಳ ಜನಪ್ರಿಯವಾದವು. ಈ ಕಥೆಗಳ ವಿಶಿಷ್ಟ ಲಕ್ಷಣವೆಂದರೆ ಸಾಂಪ್ರದಾಯಿಕತೆ. ಕಥೆ ಬಲ್ಲವರಿಂದ ಕಥೆ ಕೇಳಿದ ಮೇಲೆ, ಅದನ್ನು ಬೇರೆಯವರಿಗೆ ಹೇಳುವಾಗ ಅದನ್ನು ಹಾಗೆ ನೆನೆಪಿನಲ್ಲಿಟ್ಟುಕೊಳ್ಳುವುದು ಹಾಗೂ ಪುನರುಚ್ಚರಿಸುವ ಸಂದರ್ಭದಲ್ಲಿ ಅವರ ಬೌದ್ಧಿಕ ಸಾಮರ್ಥ್ಯ, ಕಲ್ಪನಾಶಕ್ತಿ, ನೆನಪಿನಶಕ್ತಿ, ಅನುಭವಕ್ಕನುಗುಣವಾಗಿ ಬೆಳೆಯುತ್ತಾ ಸಾಗುತ್ತದೆ. ಈ ಸಂದರ್ಭದಲ್ಲಿ ಮೂಲ ಕಥೆಯಲ್ಲಿನ ಕೆಲವು ಅಂಶಗಳನ್ನು ಕೈಬಿಡಲೂ ಬಹುದು. ಮತ್ತೆ ಕೆಲವು ಅಂಶಗಳನ್ನು ಸೇರಿಸಿಕೊಳ್ಳಬಹುದು. ಇದು ಕಥೆ ಹೇಳುವವನ ಬುದ್ಧಿವಂತಿಕೆಗೆ ಸಂಬಂಧಪಟ್ಟಿರುತ್ತದೆ. ಕಥೆಗೆ ಎಲ್ಲೂ ಚ್ಯುತಿ ಆಗದಂತೆ, ಲೋಪಬಾರದಂತೆ ಕಥೆ ಕಟ್ಟುವಂತಹುದು ಬಹುಮುಖ್ಯವಾಗಿರುತ್ತದೆ. ಜನಪದರು ಇದನ್ನೆಲ್ಲಾ ತುಂಬಾ ಬುದ್ಧಿವಂತಿಕೆಯಿಂದ ಕಟ್ಟಿಕೊಂಡಿರುವುದನ್ನು ಕಾಣುತ್ತೇವೆ.

ಕಥೆಗಳು ಪ್ರಾರಂಭವಾಗುವುದು 'ಒಂದೂರಲ್ಲಿ' 'ಒಂದು ದೇಶದಲ್ಲಿ' ಹೀಗೆ ನಿರ್ದಿಷ್ಟವಾಗಿ 'ಒಂದು' ಎಂಬುದನ್ನು ಹೇಳುತ್ತಾ ಸಾಗುತ್ತದೆ. ಇದು ಇದ್ದಕ್ಕಿದಂತೆ ಯಾವುದಾದರೂ ಒಂದು ಕ್ರಿಯೆಯಿಂದ ಪ್ರಾರಂಭ ಆಗುವುದಿಲ್ಲ. ಹಾಗೂ ತಕ್ಷಣ ಮುಕ್ತಾಯವಾಗುದೂ ಇಲ್ಲ. ಕಥೆ ಕೇಳುಗರಲ್ಲಿ ಉತ್ಸಾಹವನ್ನು ಕೆರಳಿಸುತ್ತಾ, ಆತುರತೆಯನ್ನು ಹೆಚ್ಚಿಸುತ್ತಾ, ಭಾವತೀವ್ರತೆಗೆ ಕೊಂಡೊಯ್ಯುತ್ತದೆ. ಸಾಮಾನ್ಯವಾಗಿ ಕಥೆಗಳಲ್ಲಿ, ವರ್ಣನೆಗಳು, ದುಷ್ಟರು, ನಾಯಕ, ಪ್ರತಿನಾಯಕ, ದುರ್ಬಲರು, ಪ್ರಬಲರು, ಒಳ್ಳೆಯದು, ಕೆಟ್ಟದ್ದು, ಹಿರಿಯರು-ಕಿರಿಯರು, ರಾಕ್ಷಸ-ಮನುಷ್ಯ, ಹೀಗೆ ಎಲ್ಲಾ ಅಂಶಗಳನ್ನು ಹಾಗೂ ಪಾತ್ರಗಳನ್ನು ಒಳಗೊಂಡಿರುತ್ತದೆ. ಪ್ರಾಣಿಗಳ ಪಾತ್ರಗಳು, ದೆವ್ವದ ಪಾತ್ರ, ಬೇತಾಳ ಮುಂತಾದವುಗಳನ್ನು ವಸ್ತುವಾಗಿಟ್ಟುಕೊಂಡು ಅನೇಕ ಕಥೆಗಳನ್ನು ಕಟ್ಟಿದ್ದಾರೆ. ಕಥೆ ಮೇಲ್ನೋಟಕ್ಕೆ ಕಂಡುಬಂದರೂ ಅದರೊಳಗಿರುವ ಅಂಶಗಳು ಮನುಷ್ಯನ ಬದುಕಿಗೆ ಪಾಠ ಕಲಿಸುವಂತಹ ಮೌಲ್ಯಗಳಿರುತ್ತವೆ. ಪ್ರತಿಯೊಂದು ಕಥೆ ಹೇಳುವಾಗ ಕೇಳುವರು 'ಹೂಗುಟ್ಟುವ' ಪದ್ಧತಿ ಇದೆ. ಹೂಗುಟ್ಟಿದರೆ ಮಾತ್ರ ಕಥೆಯು ಮುಂದೆ ಸಾಗುತ್ತದೆ. ರಾತ್ರಿ ವೇಳೆ ಮಕ್ಕಳನ್ನು ಮಲಗಿಸಲು ಅಜ್ಜಿಯಂದಿರು ಕಥೆಗಳನ್ನು ಹೇಳುವ ವಾಡಿಕೆ ಇದೆ. ಇದರಿಂದ ಒಂದು ಕಥೆ ಮಕ್ಕಳಿಗೆ ಮನೋರಂಜನೆಯ ಜೊತೆಗೆ ಮೌಲ್ಯಗಳನ್ನು ಕಲ್ಪನಾವಿಲಾಸವನ್ನು ಹೆಚ್ಚಿಸಲು ಮಕ್ಕಳ ಮನಸ್ಸನ್ನು ಬದಲಾಯಿಸಲು ಸಾಧ್ಯವಾಗುತ್ತದೆ. ಮುಂದಿನ ಬದುಕನ್ನು ಕಟ್ಟಿಕೊಳ್ಳುವಲ್ಲಿ ಎಲ್ಲೋ ಒಂದೆಡೆ ಕಥೆಗಳು ಪೂರಕವಾಗುತ್ತವೆ.

ರಾಮನಗರ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಪ್ರಚಲಿತದಲ್ಲಿರುವ ಪ್ರಮುಖ ಜನಪದ ಕಥೆಗಳೆಂದರೆ, ಅತಿಮಾನುಷ ಕಥೆಗಳು, ಪ್ರಾಣಿ-ಪಕ್ಷಿ ಸಂಬಂಧಿ ಕಥೆಗಳು, ರಮ್ಯ ಕಥೆಗಳು.

ಅತಿಮಾನುಷ ಕಥೆಗಳಲ್ಲಿ ಕುಂಟನ ಕಥೆ, ಆರು ಹಂಸಗಳ ಕಥೆ, ಬಿದಿರಿನಲ್ಲಿರೋ ಚೆಲುವೆ, ರಾಜನ ಕಥೆ, ರಾಕ್ಷಸಿಯ ಕಥೆಗಳು ಮುಖ್ಯವಾದವು. ಹಾಗೆಯೇ ಪ್ರಾಣಿ–ಪಕ್ಷಿಗಳಿಗೆ ಸಂಬಂಧಿಸಿದ ಕಥೆಗಳಲ್ಲಿ ಕೋತಿಯ ಕಥೆ, ಚಿಕ್ಕೋಳು ದೊಡ್ಡೋಳು, ಚಿಕ್ಕೋನ್ನಿ ಮತ್ತು ದೊಡ್ಡೋನ್ನಿ, ಕಾಗಕ್ಕ–ಗೂಬಕ್ಕ, ಪಂಜರದ ಗಿಳಿ, ಜಾರಿಬಿದ್ದ ಕೋತಿ ಕಥೆ, ರಾಜನ ಮಗಳು, ದಾಳಿಂಬೆ ಹಣ್ಣು, ಚಿನ್ನದ ತಟ್ಟೆ, ಸೊಸೆಗೆ ತಕ್ಕ ಅತ್ತೆ ಕಥೆಗಳು ಮುಖ್ಯವಾಗಿದ್ದರೆ, ರಮ್ಯಕಥೆಗಳಲ್ಲಿ 'ಬಾಲ ಹೊಯ್ತು ಹೆಂಡತಿ ಬಂದ್ಲು ಡುಂ! ಡುಂ! ಕಥೆ, ದಡ್ಡಹುಡುಗನ ಕಥೆಗಳು ಮುಖ್ಯವಾಗಿವೆ.

ಒಟ್ಟಾರೆಯಾಗಿ ರಾಮನಗರ ತಾಲ್ಲೂಕಿನಲ್ಲಿ ವಿಪುಲವಾದ ಜನಪದ ಗದ್ಯಸಾಹಿತ್ಯವು ಲಭ್ಯವಾಗಿದ್ದು, ಆ ಸಾಹಿತ್ಯದಲ್ಲಿ ಕೆಲವನ್ನಷ್ಟೇ ಈ ಲೇಖನದಲ್ಲಿ ಅವಲೋಕಿಸಲಾಗಿದ್ದು, ಬದಲಾಗುತ್ತಿರುವ ಯಾಂತ್ರಿಕ ಹಾಗೂ ತಾಂತ್ರಿಕ ಪ್ರಗತಿ ಮತ್ತು ಜಾಗತೀಕರಣದಿಂದಾಗಿ ಜನಪದ ಗದ್ಯ ಸಾಹಿತ್ಯವು ತಾಲ್ಲೂಕಿನಲ್ಲಿ ಮರೆಯಾಗುತ್ತಿರುವುದನ್ನು ಕಾಣಬಹುದು.

**ಅಡಿ ಟಿಪ್ಪಣಿಗಳು:**

1. ವಿವೇಕ ರೈ, (2000), ತುಳು ಗಾದೆಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ಪು.ಸಂ. 4
2. ತಪಸ್ವೀಕುಮಾರ್ ಎನ್., (2000), ಕನ್ನಡ ಗಾದೆಗಳ ಸಮೀಕ್ಷೆ, ಚೇತನ ಬುಕ್ ಹೌಸ್, ಬೆಂಗಳೂರು, ಪು.ಸಂ. 6
3. ಲಕ್ಕಪ್ಪಗೌಡ ಎಚ್.ಜಿ. (ಸಂ), (1996), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 39
4. ಪರಮಶಿವಯ್ಯ ಜೀ.ಶಂ., (1998), ಕನ್ನಡ ಒಗಟುಗಳು, ಸಾಹಿತ್ಯಸದನ, ಮೈಸೂರು, ಪು.ಸಂ. 51
5. ಜವರೇಗೌಡ ದೇ., (1976), ಜಾನಪದ ಅಧ್ಯಯನ, ಡಿ.ವಿ.ಕೆ. ಪ್ರಕಾಶನ, ಮೈಸೂರು, ಪು.ಸಂ. 143
6. ಪಾರ್ಥ ಅಂಕನಹಳ್ಳಿ, (2008), ರಾಮನಗರ: ಒಂದು ಸಾಂಸ್ಕೃತಿಕ ಅಧ್ಯಯನ, ಅಂಕನಹಳ್ಳಿ ಪ್ರಕಾಶನ, ರಾಮನಗರ, ಪು.ಸಂ. 86
7. ಲಕ್ಕಪ್ಪಗೌಡ ಎಚ್.ಜಿ. (ಸಂ), (1996), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 41

**ಪರಾಮರ್ಶನ ಗ್ರಂಥಗಳು:**


1. ಪಾರ್ಥ ಅಂಕನಹಳ್ಳಿ, (2008), ರಾಮನಗರ: ಒಂದು ಸಾಂಸ್ಕೃತಿಕ ಅಧ್ಯಯನ, ಅಂಕನಹಳ್ಳಿ ಪ್ರಕಾಶನ, ರಾಮನಗರ.
2. ಲಿಂಗಯ್ಯ ಡಿ., ಸಂಧ್ಯಾರೆಡ್ಡಿ ಕೆ. ಆರ್. (ಸಂ), (2006), ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ವಿವೇಕ ರೈ, (2000), ತುಳು ಗಾದೆಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
4. ತಪಸ್ವೀಕುಮಾರ್ ಎನ್., (2000), ಕನ್ನಡ ಗಾದೆಗಳ ಸಮೀಕ್ಷೆ, ಚೇತನ ಬುಕ್ ಹೌಸ್, ಬೆಂಗಳೂರು.
5. ಲಕ್ಕಪ್ಪಗೌಡ ಎಚ್.ಜಿ. (ಸಂ), (1996), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
6. ಪರಮಶಿವಯ್ಯ ಜೀ.ಶಂ., (1998), ಕನ್ನಡ ಒಗಟುಗಳು, ಸಾಹಿತ್ಯಸದನ, ಮೈಸೂರು.
7. ಜವರೇಗೌಡ ದೇ., (1976), ಜಾನಪದ ಅಧ್ಯಯನ, ಡಿ.ವಿ.ಕೆ. ಪ್ರಕಾಶನ, ಮೈಸೂರು.
8. ಚಲುವೇಗೌಡ ತ.ಚಿ., (1978), ಕೆಲವು ಜನಪದ ಸಂಪ್ರದಾಯಗಳು, ತಳಗವಾದಿ ಪ್ರಕಾಶನ, ಮೈಸೂರು.
9. ಲಕ್ಕಪ್ಪಗೌಡ ಎಚ್.ಜಿ. (ಸಂ), (1996), (1983), ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
10. ಶಿವಸ್ವಾಮಿ ಜೆ., (1987), ರಾಮನಗರ ತಾಲ್ಲೂಕು ದರ್ಶನ, ಐಬಿಎಚ್ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.